# ಕೃತಿ, ಆಕೃತಿ, ವಿಕೃತಿ– ಇತ್ಯಾದಿ

ಕ್ರಿಯೆಯೊಂದರ ಫಲಿತಾಂಶವೇ 'ಕೃತಿ' ಎಂದು ಸ್ಥೂಲವಾಗಿ ಹೇಳಬಹುದು. ಅರ್ಥಾತ್ ಕ್ರಿಯೆಯೆಂದರೆ 'ಮಾಡುವಿಕೆ', ಕೃತಿಯೆಂದರೆ ಕ್ರಿಯೆಯಿಂದ 'ಆಗುವಿಕೆ'. ಸಾಮಾನ್ಯವಾಗಿ ನಮ್ಮ ಕ್ರಿಯೆಗಳ ಹಿನ್ನೆಲೆಯಲ್ಲಿ ನಿರ್ದಿಷ್ಟ ಉದ್ದೇಶವಿರುತ್ತದೆ. ಆ ಉದ್ದೇಶವನ್ನು ಸಾಧಿಸಬೇಕೆಂಬ ಸಂಕಲ್ಪವಿರುತ್ತದೆ. ಇಂಥ ಉದ್ದೇಶ ಸಂಕಲ್ಪಗಳೆರಡೂ ಕೃತಿಯಲ್ಲಿ ಸಾಕಾರಗೊಂಡರೆ, ಅಂಥ ಕೃತಿ ಸಾರ್ಥಕತೆಯ ಅನುಭವವನ್ನು ತಂದುಕೊಡುತ್ತದೆ. ಕೃತಿ ಉತ್ಪಾದಿಸುವ ಒಳಿತು ಕೆಡಕುಗಳೆರಡೂ ಅದರ ಮೂಲ ಪ್ರೇರಣೆಯಾಗಿರುವ ಉದ್ದೇಶವನ್ನು ಅವಲಂಬಿಸಿರುತ್ತವೆ. ಸದುದ್ದೇಶವನ್ನು ಹೊಂದಿರುವ ಕೃತಿ 'ಸತ್ಕೃತಿ' ಎನ್ನಿಸಿಕೊಂಡರೆ, ದುರುದ್ದೇಶ ಪ್ರೇರಿತವಾದುದು 'ದುಷ್ಕೃತಿ' ಎನ್ನಿಸಿಕೊಳ್ಳುತ್ತದೆ.

ಕೃತಿ ಎಂದರೆ ಕ್ರಿಯೆಯೊಂದರ ಫಲಿತಾಂಶ ಎಂಬುದನ್ನು ಈಗಾಗಲೇ ಗಮನಿಸಿದ್ದೇವೆ. ಆದರೆ ಕ್ರಿಯೆ ಕೃತಿಯಾಗಿ ಪರ್ಯವಸಾನಗೊಂಡಾಗ ಅದಕ್ಕೊಂದು 'ಆಕೃತಿ' ಪ್ರಾಪ್ತವಾಗದೇ, ಕೃತಿಯ ಪರಿಣಾಮ ಚದರಿಹೋದರೆ ಅದರ ಹಿಂದಿರುವ ಉದ್ದೇಶ ಫಲಿಸುವುದಿಲ್ಲ. ಒಂದು ಸರಳ ಉದಾಹರಣೆಯನ್ನು ನೋಡೋಣ. ಈಗಷ್ಟೇ ಅಕ್ಷರಾಭ್ಯಾಸವನ್ನು ಪ್ರಾರಂಭಿಸಿರುವ ಮಗು ಕೈಯಲ್ಲಿ ಬಳಪವನ್ನು ಹಿಡಿದು ಸ್ಲೇಟಿನ ಮೇಲೆ ಗೀಚುಗೆರೆ ಎಳೆಯುತ್ತದೆ. ಅಂಥ ಗೆರೆಗಳಿಗೆ ಯಾವುದೇ ಅರ್ಥವಿರುವುದಿಲ್ಲ. ಅವು ವ್ಯವಸ್ಥಿತವಾಗಿ ಸೇರಿಕೊಂಡಾಗ ಮಾತ್ರ ಅಕ್ಷರವೊಂದರ ನಿರ್ದಿಷ್ಟ 'ಆಕೃತಿ' ಪಡೆಯುತ್ತವೆ. ಆಗಲೇ ಮಗುವಿನ 'ಕ್ರಿಯೆ'ಗೆ ಅರ್ಥ ಪ್ರಾಪ್ತವಾಗುತ್ತದೆ. ಕಲಾವಿದನೊಬ್ಬ ಒಂದು ಭೂದೃಶ್ಯ (Land scape)ದ ಚಿತ್ರವನ್ನು ರಚಿಸಲು ಹೊರಟಿದ್ದಾನೆಂದು ಭಾವಿಸೋಣ. ಆತನ ಮನಸ್ಸಿನಲ್ಲಿ ಒಂದು ನಿರ್ದಿಷ್ಟ ಉದ್ದೇಶವಿದೆ; ಚಿತ್ರಿಸುವುದಕ್ಕೆ ಅಗತ್ಯವಾಗಿರುವ ಬಣ್ಣ, ಕುಂಚ, ಕಾಗದ ಇತ್ಯಾದಿ ಪರಿಕರಗಳೂ ಇವೆ. ಆದರೆ ಉದ್ದೇಶಿಸಿರುವ ಭೂದೃಶ್ಯಕ್ಕೂ, ಆತನ ಕೃತಿಯಲ್ಲಿ ಮೂಡಿಬಂದ ದೃಶ್ಯಕ್ಕೂ ಸಂಬಂಧವಿಲ್ಲದಿದ್ದರೆ, ಕೃತಿ 'ಆಕೃತಿ'ಯಾಗಿ ಪರಿಣಮಿಸಲಿಲ್ಲವೆಂದೇ ಅರ್ಥ. ಈ ತತ್ವವನ್ನು ಮನುಷ್ಯನ ಎಲ್ಲ ಕ್ರಿಯೆಗಳಿಗೂ ಅನ್ವಯಿಸಬಹುದು. ಕೃಷಿಕನ ಕೃತಿ ಆತ ಪಡೆಯುವ ಬೆಳೆಯಲ್ಲಿ, ವ್ಯಾಪಾರಿಯ ವ್ಯವಹಾರ ಆತ ಗಳಿಸುವ ಲಾಭದಲ್ಲಿ 'ಆಕೃತಿ'ಗೊಂಡಾಗ ಮಾತ್ರ ಅವರಿಗೆ ಸಾರ್ಥಕತೆಯ ಅನುಭವ ಎಟುಕುವಂತಾಗುತ್ತದೆ.

ಆದರೆ ಎಷ್ಟೋ ಬಾರಿ ಕೃತಿ ಆಕೃತಿಯಾಗುವುದರಲ್ಲಿ ಸೋತು, ಇನ್ನೇನೋ ಆಗಿಬಿಡುತ್ತದೆ. 'ವಿನಾಯಕಂ ಪ್ರಕುರ್ವಾಣ ರಚಯಾ ಮಾಸ ವಾನರಂ' ಎಂಬ ನಾಣ್ಣುಡಿಯೊಂದು ಸಂಸ್ಕೃತದಲ್ಲಿದೆ. 'ಒಬ್ಬಾತ ಗಣೇಶನ ಆಕೃತಿಯನ್ನು ರಚಿಸಲು ಪ್ರಯತ್ನ ಪಟ್ಟು ಕೋತಿಯೊಂದರ ಆಕೃತಿಯನ್ನು ಮಾಡಿದ' ಎಂಬುದು ಇದರ ಅರ್ಥ. ಕೃತಿಯೊಂದರಿಂದ ಉದ್ದೇಶಿತ ಆಕೃತಿ ಫಲಿತಗೊಳ್ಳುವುದರ ಬದಲು 'ವಿ–ಕೃತಿ' ರೂಪುಗೊಳ್ಳುವುದು ಹೀಗೆ. ನಮ್ಮ ಪುರಾಣಗಳಲ್ಲಿ ಸಮುದ್ರ ಮಥನದ ಪ್ರಸ್ತಾಪ ಬರುತ್ತದೆಯಷ್ಟೆ? ಮುಪ್ಪು ಮತ್ತು ಮರಣವನ್ನು ದೂರವಿರಿಸುವ ಅಮೃತವನ್ನು ಪಡೆಯುವ ಉದ್ದೇಶದಿಂದ ದೇವದಾನವರು ಕ್ಷೀರ ಸಾಗರವನ್ನು ಕಡೆಯಲು ತೊಡಗುತ್ತಾರೆ. ಈ ಮಥನ ಕ್ರಿಯೆಯಲ್ಲಿ ವಿನಾಶಕಾರಿಯಾದ ಹಾಲಾಹಲ ವಿಷ ಕಾಣಿಸಿಕೊಂಡ ನಂತರವೇ ಕಲ್ಯಾಣಕಾರಿಯಾದ ಅಮೃತ ಉದ್ಭವಿಸುತ್ತದೆ. ಇಲ್ಲಿ ಹಾಲಾಹಲವೆಂಬುದು 'ವಿ–ಕೃತಿ'ಯನ್ನು ಪ್ರತಿನಿಧಿಸಿದರೆ ಅಮೃತವು ದೇವದಾನವರ ಉದ್ದೇಶಿತ ಕ್ರಿಯೆಯನ್ನು ಪೂರೈಸುವ 'ಆಕೃತಿ'ಯನ್ನು ಪ್ರತಿನಿಧಿಸುತ್ತದೆ ಎನ್ನಬಹುದು.

ಇದೇ ರೀತಿ ಕೃತಿ, ಆಕೃತಿ, ವಿಕೃತಿಗಳ ಪರಿಕಲ್ಪನೆಯನ್ನು ಭಾರತದ ಪ್ರಸ್ತುತ ಸ್ಥಿತಿಗತಿಗಳಿಗೂ ವಿಸ್ತರಿಸಬಹುದೇನೋ. ಕಳೆದ ಶತಮಾನದಲ್ಲಿ ನಡೆದ ಸ್ವಾತಂತ್ರ್ಯ ಹೋರಾಟ ಎಂಬ ಕ್ರಿಯೆಗೆ ಪರಕೀಯರ ಆಳ್ವಿಕೆಯಿಂದ ಬಿಡುಗಡೆ ಹಾಗೂ ಪ್ರಾಮಾಣಿಕ ಪಾರದರ್ಶಕ ಪ್ರಜಾಪ್ರಭುತ್ವದ ಸ್ಥಾಪನೆ ಎಂಬ ಉದ್ದೇಶಗಳಿದ್ದವು. ಸ್ವಾತಂತ್ರ್ಯವೇನೋ ದೊರೆಯಿತು; ಅಂದರೆ ಹೋರಾಟದ ಉದ್ದೇಶ ಭಾಗಶಃ ಆಕೃತಿಯಾಗಿ ಫಲಿತವಾದಂತಾಯಿತು. ಆದರೆ ಪ್ರಾಮಾಣಿಕ, ಪಾರದರ್ಶಕ ಪ್ರಜಾತಂತ್ರದ ಬದಲು– ಸ್ವಾರ್ಥ, ದುರಾಶೆ, ಅನೈತಿಕತೆ, ಅಪ್ರಮಾಣಿಕತೆಗಳಿಂದ ಕೂಡಿದ ರಾಜಕಾರಣ ವಿಜೃಂಭಿಸುವಂತಾಯಿತು. ಆಕೃತಿಯ ಬದಲು 'ವಿಕೃತಿ' ಸಂಭವಿಸುವ ಸಂದರ್ಭಕ್ಕೆ ಇದೊಂದು ಸ್ಪಷ್ಟ ಉದಾಹರಣೆ.

ಒಂದು ಕೃತಿ ಸತ್ಕೃತಿಯಾಗಬೇಕಾದರೆ ಸೂಕ್ತ ಕಾಲ, ಪರಿಸರ, ಸನ್ನಿವೇಶ– ಇತ್ಯಾದಿಗಳೆಲ್ಲವೂ ಒದಗಿ ಬರಬೇಕು. ಆದ್ದರಿಂದಲೇ ಕವಿ ನೇಮಿಚಂದ್ರ 'ಬೆಲೆಯಿಂದಕ್ಕುಮೆ ಕೃತಿ, ಗಾವಿಲ! ಭುವನದ ಭಾಗ್ಯದಿಂದಮಕ್ಕುಂ...' ಎಂದಿರುವುದು.

■ ವೈನತೇಯ

## ಮಾತೇ ಮುತ್ತು

★ ನಿಜವಾದ ಸದ್ಗೃಹಸ್ಥ– ನೆರೆಮನೆಯಾತನ ಪತ್ನಿಯ ರೂಪ, ಸೌಂದರ್ಯ, ಲಾವಣ್ಯವನ್ನು ಗಮನಿಸದೇ ಇರುತ್ತಾನೆ.

-ತಿರುವಳ್ಳುವರ್

★ ಯಾರು ತಮ್ಮ ಕಣ್ಣೆದುರಿನಲ್ಲೆ ಕೂಳಿಲ್ಲದೆ ಸಾಯುವವರನ್ನು ಕಂಡರೂ, ಒಂದು ತುತ್ತನ್ನಾದರೂ ದಾನ ಮಾಡದೆ– ವೃದ್ಧ ಮೃಗ ಪಕ್ಷಿಗಳಿಗೂ ಲಕ್ಷ ಲಕ್ಷ ಧನ ವ್ಯಯ ಮಾಡುವರೋ ಅಂಥವರನ್ನು ನಾನು ಮನ್ನಿಸಲಾರೆ.

-ಸ್ವಾಮಿ ವಿವೇಕಾನಂದ

★ ಕಷ್ಟದಲ್ಲಿ ನೊಂದವರನ್ನು ಕಂಡಾಗ ನೆರವಿಗಾಗಿ ಯಾರು ಧಾವಿಸುತ್ತಾರೋ, ಯಾರು ಔದಾರ್ಯದಿಂದ ಹೃದಯ ಬಿಚ್ಚಿ ನೆರವಾಗುತ್ತಾರೋ ಅವರೇ ನಿಜವಾದ ಸಂತರು.

-ವೀರೇಂದ್ರ ಹೆಗ್ಗಡೆ

★ ಭಾಗ್ಯವಂತ ದಾನಶೀಲತೆಯನ್ನು ತನ್ನದಾಗಿಸಿಕೊಳ್ಳುತ್ತಾನೆ ಮತ್ತು ದಾನಶೀಲತೆಯಿಂದಲೇ ಮನುಷ್ಯ ಭಾಗ್ಯವಂತನಾಗುತ್ತಾನೆ.

-ಶೇಖ್ ಸಾದಿ

★ ಕರುಣೆಯಲ್ಲಿ ಶೀತಲ ಅಗ್ನಿ ಇರುತ್ತದೆ. ಅದು ಕ್ರೂರಿಯಾದವನ ಹೃದಯವನ್ನೂ ದ್ರವಿಸಬಲ್ಲದು.

-ವಿ.ಕೃ.ಗೋಕಾಕ್

★ ತಯ್ಯಾರಿ ಬೇಕಾಗಿರುವುದು ಬರಹಗಾರನಿಗೆ, ಓದುಗನಿಗಲ್ಲ. ಓದುಗನ ತಯ್ಯಾರಿಯನ್ನು ಬಯಸುವ ಕೃತಿಗಳು ಸಾಧಾರಣೀಕರಣದಿಂದ ವಂಚಿತವಾಗಿ ಕೇವಲ ಪಾಂಥಿಕವಾಗುತ್ತವೆ.

-ಎಚ್.ಎಸ್.ಶಿವಪ್ರಕಾಶ್

★ ಹಿರಿಯರು ಇಲ್ಲದ ಸಭೆ ಸಭೆಯಲ್ಲ. ಯಾರು ಧರ್ಮದ ಬಗ್ಗೆ ಮಾತನಾಡುವುದಿಲ್ಲ– ಅವರು ಹಿರಿಯರಲ್ಲ.

-ಮಹಾಭಾರತ

★ ನೂರು ಉಪದೇಶಗಳಿಗಿಂತಲೂ ಆಪತ್ಕಾಲದಲ್ಲಿ ಮಾಡಿದ ಒಂದು ಸಹಾಯವು ಶ್ರೇಷ್ಠವಾದದ್ದು.

-ಗೌತಮ ಬುದ್ಧ

★ ಪುರುಷನಿಗೆ ಪ್ರೀತಿ ಒಂದು ಭಾವ, ಹೆಣ್ಣಿಗೆ ಅದು ಭಾವನೆ.

-ತ್ರಿವೇಣಿ

★ ಅರ್ಥವಾಗುವುದಕ್ಕೆ ಮೊದಲೇ ನಮ್ಮೊಡನೆ ಮಾತನಾಡುವುದೇ ಕಾವ್ಯ!

-ಟಿ.ಎಸ್.ಎಲಿಯಟ್

★ ಸುಳ್ಳುಗಾರನಿಗೆ, ಮೋಸಗಾರನಿಗೆ ಸಜ್ಜನಿಕೆ ಇರುವುದಿಲ್ಲ.

-ಸಿಂಗರಾಜ

★ ಮನುಷ್ಯ ಎರಡು ರೀತಿಯ ತೊಂದರೆಗೆ ಸಿಕ್ಕಿ ಸಂಕಟಪಡುತ್ತಾನೆ: ತೀರಾ ಸಂಕೀರ್ಣವಾದ ಸತ್ಯಗಳನ್ನು ಅರ್ಥ ಮಾಡಿಕೊಳ್ಳಲಾರ, ಅತ್ಯಂತ ಸರಳ ಸತ್ಯಗಳನ್ನು ಆತ ನೆನಪಿನಲ್ಲಿ ಇಟ್ಟುಕೊಳ್ಳಲಾರ.

-ರೆಬೆಕಾ ವೆಸ್ಟ್

★ ಅಹಂಕಾರ ಮತ್ತು ಆಡಂಬರದಿಂದ ನೀಡಿದ ಉಡುಗೊರೆ ಉದಾರತೆಯ ಲಕ್ಷಣವಲ್ಲ. ಅದು ಮಹಾತ್ವಾಕಾಂಕ್ಷೆಯ ಸೂಚಕ.

-ಸೆನೇಕಾ